<u>ಕರ್ನಾಟಕ ವಿಧಾನ ಪರಿಷತ್ತು</u>

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 361 |
| 2 | ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 18-07-2024 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಿಂದ ವಿಮಾನ ನಿಲ್ದಾಣಕ್ಕೆ ಹೋಗುವ ರಸ್ತೆಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಈ ಸಂಚಾರ ದಟ್ಟಣೆಯಿಂದ ಸಕಾಲದಲ್ಲಿ ವಿಮಾನ ನಿಲ್ದಾಣಕ್ಕೆ ತೆರಳಲು ತುಂಬಾ ತೊಂದರೆಯಾಗುವುದರಿಂದ ಈ ದಟ್ಟಣೆಯನ್ನು ಕಡಿಮೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; | ಸರ್ಕಾರವು ತುರ್ತು, ಅಲ್ಪಾವಧಿ ಮತ್ತು ದೀರ್ಘಾವಧಿ ಕಾರ್ಯಕ್ರಮಗಳನ್ನು ರೂಪಿಸುತ್ತಿರುತ್ತದೆ. ತುರ್ತು ಕಾರ್ಯಕ್ರಮದ ಅಡಿಯಲ್ಲಿ ಹೆಬ್ಬಾಳ ಮೇಲ್ಸೇತುವೆಗೆ ಇರುವ ಎರಡು ಪಥಗಳಲ್ಲಿ ಒಂದನ್ನು ವಿಮಾನ ನಿಲ್ದಾಣ ಮೇಲ್ಸೇತುವೆಯಿಂದ ಬರುವ ವಾಹನಗಳಿಗೆ ಹಾಗೂ ಸೇತುವೆ ಕೆಳಗಿನಿಂದ ಬರುವ ವಾಹನಗಳಿಗೆ ಪ್ರತ್ಯೇಕ ಪಥಗಳನ್ನು ವಿಂಗಡಿಸಲಾಗಿರುತ್ತದೆ. ಇದರಿಂದ, ವಾಹನವು ಸಂಚಾರಕ್ಕೆ ತೆಗೆದುಕೊಳ್ಳುವ ಸಮಯವನ್ನು ಕಡಿಮೆಗೊಳಿಸಲಾಗಿರುತ್ತದೆ.<br><br>ಅಲ್ಪಾವಧಿ ಕಾರ್ಯಕ್ರಮದಡಿಯಲ್ಲಿ ಪ್ರಸ್ತುತ ಇರುವ 02 ಪಥದ ಮೇಲ್ಸೇತುವೆಯನ್ನು 04 ಪಥಕ್ಕೆ ವಿಸ್ತರಿಸಲಾಗುತ್ತಿದ್ದು, ಸದರಿ ಕಾಮಗಾರಿಯನ್ನು ಬಿ.ಡಿ.ಎ ವತಿಯಿಂದ ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ.<br><br>ಧೀರ್ಘಾವಧಿ ಕಾರ್ಯಕ್ರಮದಡಿಯಲ್ಲಿ ಸುರಂಗ ಮಾರ್ಗ ನಿರ್ಮಿಸುವ ಯೋಜನೆಯನ್ನು ಉದ್ದೇಶಿಸಲಾಗಿದೆ. |
| ಇ) | ಹೆಬ್ಬಾಳ ಸುರಂಗ ಮಾರ್ಗ ಕಾಮಗಾರಿಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಈ ಕಾಮಗಾರಿಗೆ ಆಯವ್ಯಯದಲ್ಲಿ ಹಣ ನಿಗಧಿಪಡಿಸಲಾಗಿದೆಯೇ; ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು ಯಾವಾಗ? | ಪ್ರಸ್ತುತ ಹೆಬ್ಬಾಳ ಸುರಂಗ ಮಾರ್ಗ ಕಾಮಗಾರಿ ಪ್ರಸ್ತಾವನೆಯು ಸರ್ಕಾರದ ಮುಂದಿದ್ದು, ಬಳ್ಳಾರಿ ರಸ್ತೆಯ ಹೆಬ್ಬಾಳ-ಕೆಂಪಾಪುರದಿಂದ (ಎಸ್ಟೀಮ್ ಮಾಲ್) ಹೊಸೂರು ರಸ್ತೆಯ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೂ ಸುರಂಗ ಮಾರ್ಗ ನಿರ್ಮಿಸಲು ಯೋಜನೆಯನ್ನು ರೂಪಿಸಲಾಗುತ್ತಿದೆ. ಪ್ರಸ್ತುತ, ಮೆ॥ ಅಲ್ಟೀನಾಕ್ (ಇಂಡಿಯಾ) ಸಂಸ್ಥೆಯವರು ಸದರಿ ಯೋಜನೆಗೆ ಸಾಧಕ ವರದಿ (**Fesibility Report**) ಅನ್ನು ಸಲ್ಲಿಸಿದ್ದು, ಸುರಂಗ ಮಾರ್ಗ ಯೋಜನೆ ಅನುಷ್ಠಾನಗೊಳಿಸಬಹುದೆಂದು ತಿಳಿಸಿರುತ್ತಾರೆ.<br><br>ಮುಂದುವರೆದಂತೆ, ಸದರಿ ಸುರಂಗ ಮಾರ್ಗದ ನಿರ್ಮಾಣಕ್ಕಾಗಿ ಡಿ.ಪಿ.ಆರ್ ತಯಾರಿಕೆಗಾಗಿ ಎರಡನೇ ಹಂತದಲ್ಲಿ ಟೆಂಡರ್ ಕರೆಯಲಾಗಿದ್ದು, ಮೆ॥ ರೋಡಿಕ್ ಸಂಸ್ಥೆಯನ್ನು ಆಯ್ಕೆ ಮಾಡಲಾಗಿರುತ್ತದೆ. ಈ ಸಂಸ್ಥೆಗೆ ಡಿ.ಪಿ.ಆರ್ ತಯಾರಿಸಲು ಟೆಂಡರ್‌ನಲ್ಲಿ 60 ದಿನಗಳ ಕಾಲಾವಕಾಶ ನೀಡಲಾಗಿದ್ದು, ಸೆಪ್ಟೆಂಬರ್-15 ರೊಳಗಾಗಿ ಡಿ.ಪಿ.ಆರ್ ಸಲ್ಲಿಕೆಯಾಗುವುದೆಂದು ನಿರೀಕ್ಷಿಸಲಾಗಿದೆ. |

. . . 2 .

| | | |
|---|---|---|
| | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ ಬ್ರ್ಯಾಂಡ್ ಬೆಂಗಳೂರು ಸುಗಮ ಸಂಚಾರ ಯೋಜನೆಯ ಶೀರ್ಷಿಕೆ ಅಡಿಯಲ್ಲಿ ರೂ.200.00 ಕೋಟಿಗಳನ್ನು ಪ್ರಾಥಮಿಕ ಮೊತ್ತ (**Seed Money**)ಅನ್ನು ಮೀಸಲಿಡಲಾಗಿರುತ್ತದೆ. |

**ನಅಇ 337 ಎಂಎನ್‌ವೈ 2024**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ